# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 938
2. ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
3. ಉತ್ತರಿಸುವ ದಿನಾಂಕ : 24/07/2024
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದೆಹಲಿಯ ಕರ್ನಾಟಕ ಭವನದ 1, 2 ಹಾಗೂ 3 ಭವನಗಳು ಯಾವ ವರ್ಷದಲ್ಲಿ ನಿರ್ಮಾಣವಾಗಿವೆ; ಮೂರು ಭವನಗಳ ನಿರ್ಮಾಣಕ್ಕಾಗಿ ತಗುಲಿರುವ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು)</td><td>ನವದೆಹಲಿಯಲ್ಲಿ ಕರ್ನಾಟಕ ಭವನ 1, 2 & 3 ಕಟ್ಟಡಗಳ ನಿರ್ಮಾಣದ ವಿವರಗಳು ಕೆಳಕಂಡಂತಿದೆ.
<table>
<tr><th>ಕ್ರ.<br>ಸಂ.</th><th>ಕಟ್ಟಡದ ಹೆಸರು</th><th>ನಿರ್ಮಾಣದ ವರ್ಷ</th><th>ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>01</td><td>ಕರ್ನಾಟಕ ಭವನ -1 (ಅನೆಕ್ಸ್)</td><td>2010</td><td>3600.00</td></tr>
<tr><td>02</td><td>ಕರ್ನಾಟಕ ಭವನ -2 (ಶರಾವತಿ)</td><td>1988</td><td>198.00</td></tr>
<tr><td>03</td><td>ಕರ್ನಾಟಕ ಭವನ -3 (ಭೀಮ) (HUDCO ರವರಿಗೆ ದಿ:21.11.1996 ರಿಂದ 20.11.2095 ಅಂದರೆ 99 ವರ್ಷಗಳಿಗೆ ಲೀಸ್ ನೀಡಲಾಗಿರುತ್ತದೆ.</td><td>1988</td><td>976.00</td></tr>
</table></td></tr>
<tr><td>ಆ)</td><td>ಈ ಮೂರು ಭವನಗಳಲ್ಲಿ ಮಂಜೂರಾಗಿರುವ ಐ.ಎ.ಎಸ್ ಹುದ್ದೆಗಳು ಎಷ್ಟು; ಪ್ರಸ್ತುತ ಎಷ್ಟು ಜನ ಐ.ಎ.ಎಸ್. ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ; ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಅಧಿಕಾರಿ/ಸಿಬ್ಬಂದಿಗಳೆಷ್ಟು ಗುತ್ತಿಗೆ ಆಧಾರದ ಮೇಲೆ ಅಥವಾ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳೆಷ್ಟು; (ವಿವರ ನೀಡುವುದು)</td><td>ನವದಹೆಲಿಯ ನಿವಾಸಿ ಆಯುಕ್ತರ ಕಛೇರಿ, ಕರ್ನಾಟಕ ಭವನದಲ್ಲಿ ಒಟ್ಟು 2 ಖಾಯಂ ಹಾಗೂ 1 ತಾತ್ಕಾಲಿಕ ಐ.ಎ.ಎಸ್ ಹುದ್ದೆ ಸೇರಿದಂತೆ ಒಟ್ಟು 3 ಐ.ಎ.ಎಸ್. ಹುದ್ದೆಗಳು ಮಂಜೂರಾಗಿರುತ್ತವೆ.<br><br>ಪ್ರಸ್ತುತ 2 ಖಾಯಂ ಐ.ಎ.ಎಸ್ ಹುದ್ದೆಗಳು ಹಾಗೂ ಒಂದು ತಾತ್ಕಾಲಿಕ ಐ.ಎ.ಎಸ್ ಹುದ್ದೆ ಸೇರಿದಂತೆ ಒಟ್ಟು ಮೂರು ಐ.ಎ.ಎಸ್ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ನಿವಾಸಿ ಆಯುಕ್ತರ ಕಛೇರಿ ಹಾಗೂ ಮೂರು ಕರ್ನಾಟಕ ಭವನಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಯಂ /ನಿಯೋಜನೆ ಹಾಗೂ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಅಧಿಕಾರಿ/ಸಿಬ್ಬಂದಿಗಳ ವಿವರಗಳು ಈ ಕೆಳಗಿನಂತಿವೆ.
<table>
<tr><th></th><th></th><th>ಖಾಯಂ</th><th>ನಿಯೋಜನೆ</th><th>ಗುತ್ತಿಗೆ</th></tr>
<tr><td rowspan="2">ಕರ್ನಾಟಕ ಭವನ.1,2, &3</td><td>ಅಧಿಕಾರಿಗಳು</td><td>01</td><td>-</td><td>-</td></tr>
<tr><td>ಸಿಬ್ಬಂದಿಗಳು</td><td>96</td><td>1</td><td>-</td></tr>
<tr><td rowspan="2">ನಿವಾಸಿ ಆಯುಕ್ತರ ಕಛೇರಿ</td><td>ಅಧಿಕಾರಿಗಳು</td><td>03</td><td>-</td><td>2</td></tr>
<tr><td>ಸಿಬ್ಬಂದಿಗಳು</td><td>14</td><td>2</td><td>-</td></tr>
<tr><td>ಒಟ್ಟು</td><td>119</td><td>114</td><td>3</td><td>2</td></tr>
</table></td></tr>
<tr><td>ಇ)</td><td>ಕರ್ನಾಟಕ ಭವನಗಳಲ್ಲಿರುವ ವಾಹನಗಳೆಷ್ಟು; ಯಾವ ಯಾವ ಶ್ರೇಣಿಯ ಅಧಿಕಾರಿ ಮತ್ತು ಜನ ಪ್ರತಿನಿಧಿಗಳಿಗೆ ವಾಹನ ಸೌಲಭ್ಯವನ್ನು ಒದಗಿಸುತ್ತಿದ್ದಾರೆ;</td><td>ಪ್ರಸ್ತುತ ಕರ್ನಾಟಕ ಭವನದಲ್ಲಿ ಪೆಟ್ರೋಲ್/ಡೀಸೆಲ್ ಹಾಗೂ ಎಲೆಕ್ಟ್ರಿಕ್ ವಾಹನಗಳನ್ನೊಳಗೊಂಡಂತೆ 2021-22 2022-23 & 2023-24 ನೇ ಸಾಲಿನಲ್ಲಿ ಒಟ್ಟು 35 ನಾಲ್ಕು ಚಕ್ರ ವಾಹನಗಳಿರುತ್ತವೆ. ಇವುಗಳಲ್ಲಿ 2 ವಾಹನಗಳು ಪ್ರಸ್ತುತ</td></tr>
</table>

| | | |
|---|---|---|
| | ಸದರಿ ವಾಹನಗಳಿಗೆ ಪ್ರತಿ ತಿಂಗಳು ಖರ್ಚಾಗುವ ಇಂಧನ ಎಷ್ಟು; (ಲೀಟರ್ ಗಳಲ್ಲಿ) ಹಾಗೂ ಸದರಿ ವಾಹನಗಳು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಿಲೋ ಮೀಟರ್ ಸಂಚಾರ ಮಾಡಿರುತ್ತವೆ; ಹಾಗೂ ಸದರಿ ವಾಹನಗಳಿಂದ ಬಂದಿರುವ ಆದಾಯವೆಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು) | ಬಳಕೆಯಲ್ಲಿರುವುದಿಲ್ಲ. ವಾಹನ ಸೌಲಭ್ಯಗಳ ಒದಗಿಸಿರುವ ವಿವರಗಳನ್ನು ಹಾಗೂ ಸದರಿ ವಾಹನಗಳು ಕಳೆದ ಮೂರು ವರ್ಷಗಳಲ್ಲಿ ಸಂಚಾರ ಮಾಡಿದ ವಿವರಗಳನ್ನು **ಅನುಬಂಧ-1ರಲ್ಲಿ** ಮತ್ತು ಸದರಿ ವಾಹನಗಳಿಗೆ ಪ್ರತೀ ತಿಂಗಳು ಬಳಸಿದ ಇಂಧನದ ವಿವರವನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಈ) | ಕರ್ನಾಟಕ ಭವನ-1 ಮತ್ತು 2 ರಲ್ಲಿರುವ ಉಪಹಾರ ಗೃಹಗಳು ನಿರ್ವಹಣೆ ಮಾಡುವ ಅಧಿಕಾರಿಗಳ ಶ್ರೇಣಿಯನ್ನು ಕೊಡುವುದು; ಕಳೆದ ಮೂರು ವರ್ಷಗಳಲ್ಲಿ ಸದರಿ ಉಪಹಾರ ಗೃಹಗಳಿಗೆ ಖರ್ಚಾದ ಮೊತ್ತ ಎಷ್ಟು ಹಾಗೂ ಅವುಗಳಿಂದ ಬಂದಿರುವ ಆದಾಯ ಎಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು) | ಪ್ರತೀ ಭವನಗಳಲ್ಲಿನ ಉಪಹಾರ ಗೃಹಗಳನ್ನು ಸಹಾಯಕ ವ್ಯವಸ್ಥಾಪಕರು ಗ್ರೂಪ್ "ಸಿ" ವೃಂದದ (ವೇತನ ಶ್ರೇಣಿ ರೂ 27650-52650) 2 ಪಾಳಿಯಲ್ಲಿ ನಿರ್ವಹಣೆ ಮಾಡುತ್ತಿದ್ದು, ಇವರುಗಳ ಮೇಲ್ವಿಚಾರಣೆಯನ್ನು ಒಬ್ಬರು ಗ್ರೂಪ್ "ಬಿ" ಹಿರಿಯ ವೃಂದದ ವ್ಯವಸ್ಥಾಪಕರು (ವೇತನ ಶ್ರೇಣಿ ರೂ 37900-70850) ಮಾಡುತ್ತಾರೆ.<br><br>ಇವು ರಾಜ್ಯ ಅತಿಥ್ಯ ಸಂಸ್ಥೆಗಳಾಗಿದ್ದು, ಸೇವೆಯೇ ಪ್ರಧಾನವಾಗಿದ್ದು, No Profit & No Loss ತತ್ವದ ಆಧಾರದಲ್ಲಿ ಸೇವೆ ನೀಡುತ್ತಿದೆ.<br><br>ಕರ್ನಾಟಕ ಭವನ-1 ಮತ್ತು 2 ರ ಉಪಹಾರ ಗೃಹಗಳಿಗೆ ಕಳೆದ ಮೂರು ವರ್ಷಗಳಲ್ಲಿ ಖರ್ಚಾದ ಮೊತ್ತ (ದಿನಸಿ, ತರಕಾರಿ, ವಿದ್ಯುತ್, ನೀರು ಮತ್ತು ಗ್ಯಾಸ್ ಬಿಲ್ಲು ಹಾಗೂ ಇನ್ನಿತರೆ ನಿರ್ವಹಣಾ ವೆಚ್ಚ ಸೇರಿ) ಹಾಗೂ ಅವುಗಳಿಂದ ಬಂದಿರುವ ಆದಾಯ ವಿವರಗಳನ್ನು (ಊಟ ವಸತಿ, ಸಾರಿಗೆ ಮತ್ತು ಇತ್ಯಾದಿ) **ಅನುಬಂಧ-3ರಲ್ಲಿ** ನೀಡಲಾಗಿದೆ. |
| ಉ) | ಕರ್ನಾಟಕ ಭವನ-3 ರಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ) ದವರಿಗೆ ಗುತ್ತಿಗೆ ಆಧಾರದಲ್ಲಿ ಉಪಹಾರ ಗೃಹ ನಿರ್ವಹಣೆ ಮಾಡಲು ಎಷ್ಟು ವರ್ಷಗಳ ಅವಧಿಗೆ ಗುತ್ತಿಗೆ ಕೊಡಲಾಗಿದೆ; ಬಂದಿರುವ ಆದಾಯ ಎಷ್ಟು; ಕೆ.ಎಸ್.ಟಿ.ಡಿ.ಸಿ. ರವರಿಗೆ ನೀಡಲಾದ ಹಣವೆಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂ. ಸಿಆಸುಇ/90/ಹೆಚ್ಎಂಬಿ/2019, ಬೆಂಗಳೂರು ದಿ.12.03.2020 ರನ್ವಯ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ ಎಸ್ ಟಿ ಡಿ ಸಿ) ಕ್ಕೆ ಕರ್ನಾಟಕ ಭವನ-3 (ಭೀಮಾ) ವನ್ನು ದಿ.01.05.2020 ರಿಂದ ದಿ.30.04.2023 ರವರೆಗೆ 3 ವರ್ಷದ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ, ಮುಂದುವರೆದು ಸರ್ಕಾರದ ಪತ್ರ ಸಂ.ಸಿಆಸುಇ 14 ಹೆಚ್ಎಂಬಿ 2023, ದಿ:11.06.2024 ರನ್ವಯ ದಿ.01.05.2023 ರಿಂದ ಮತ್ತೆ 3 ವರ್ಷದ ಅವಧಿಗೆ ಗುತ್ತಿಗೆ ಅವಧಿಯನ್ನು ಕೆ.ಎಸ್.ಟಿ.ಡಿ.ಸಿ ಗೆ ಮುಂದುವರೆಸಲು ಸರ್ಕಾರವು ಆಡಳಿತಾತ್ಮಕ ಅನುಮತಿ ನೀಡಿರುತ್ತದೆ.<br><br>ಇದು ರಾಜ್ಯ ಅತಿಥ್ಯ ಸಂಸ್ಥೆಯಾಗಿದ್ದು, ಸೇವೆಯೇ ಪ್ರಧಾನವಾಗಿದ್ದು, No Profit & No Loss ತತ್ವದ ಆಧಾರದಲ್ಲಿ ಸೇವೆ ನೀಡುತ್ತಿದೆ.<br><br>ಕಳೆದ ಮೂರು ವರ್ಷಗಳಿಂದ ಕರ್ನಾಟಕ ಭವನ-3 ರಲ್ಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಬಂದಿರುವ ಆದಾಯ (ವಸತಿ ಶುಲ್ಕ ಮಾತ್ರ) ಹಾಗೂ ನಾವು ಕೆ.ಎಸ್.ಟಿ.ಡಿ.ಸಿ ಸಂಸ್ಥೆ |

| | | |
|---|---|---|
| | | ಪಾವತಿಸಿದ ಹಣದ ವಿವರಗಳನ್ನು **ಅನುಬಂಧ-3ರಲ್ಲಿ** ನೀಡಲಾಗಿದೆ. |
| ಊ) | ಕಳೆದ ಮೂರು ವರ್ಷಗಳಲ್ಲಿ ಅಧಿಕಾರಿಗಳು ಕರ್ನಾಟಕ ಭವನ-1, 2 ಹಾಗೂ 3ರ ತಪಾಸಣೆಯನ್ನು ಎಷ್ಟು ಸಲ ಕೈಗೊಂಡಿರುತ್ತಾರೆ; ಹಾಗಿದ್ದಲ್ಲಿ, ತಪಾಸಣಾ ಸಮಯದಲ್ಲಿ ಕಂಡು ಬಂದಿರುವ ನ್ಯೂನತೆಗಳೇನು; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು) | ಪ್ರತಿ ತಿಂಗಳು ಎರಡು ಸಾರಿ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಕರ್ನಾಟಕ ಭವನ -1,2,3ರ ತಪಾಸಣೆ ಕೈಗೊಂಡಿರುತ್ತಾರೆ. ಈ ಸಮಯದಲ್ಲಿ ಲಿಫ್ಟ್ ರಿಪೇರಿ, ಅಡುಗೆ ಕೋಣೆ, ಬಾತ್ ರೂಂ ನಲ್ಲಿ ಸಣ್ಣ ಪುಟ್ಟ ರಿಪೇರಿ ಕೆಲಸಗಳನ್ನು ಹಾಗೂ ನೀರು ಸೋರಿಕೆಯ ಬಗ್ಗೆ ಗಮನಿಸಿದ್ದು, ಸದರಿ ಸಮಸ್ಯೆಯನ್ನು ಸಂಬಂಧಪಟ್ಟ ಸಿವಿಲ್ ಏಜೆನ್ಸಿ ಮೂಲಕ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ. |
| ಋ) | ಕರ್ನಾಟಕ ಭವನ-3 ರಲ್ಲಿ ಕೆ.ಎಸ್.ಟಿ.ಡಿ.ಸಿ. ರವರು ಎಷ್ಟು ವರ್ಷಗಳಿಂದ ಉಪಹಾರ ಗೃಹವನ್ನು ನಿರ್ವಹಣೆ ಮಾಡುತ್ತಿದ್ದು ಕೋಣೆಗಳಿಗೆ ಸರಬರಾಜು ಸೇವೆಯನ್ನು ಮಾಡಲಾಗುತ್ತಿಲ್ಲ ಮತ್ತು ಲಿಫ್ಟ್ ವ್ಯವಸ್ಥೆ ಸರಿಯಾಗಿರುವುದಿಲ್ಲ, ಸ್ವಾಗತ ಕೌಂಟರ್ ನಲ್ಲಿ ರೂಮ್ ಸರ್ವಿಸ್ ಕೊಡಲಾಗುವುದಿಲ್ಲ ಎಂಬ ಬಿತ್ತಿ ಫಲಕಗಳನ್ನು ಅಳವಡಿಸಿದ್ದು ಕಾರಣವೇನು; ಸಾರ್ವಜನಿಕರಿಗೆ ಸರಿಯಾದ ಸೇವೆ ಲಭ್ಯವಾಗುತ್ತಿಲ್ಲ, ಮಕ್ಕಳು, ಹಿರಿಯ ನಾಗರೀಕರು ಹಾಗೂ ವಿಕಲ ಚೇತನರಿಗೆ ಯಾವುದೇ ವಿಶೇಷ ಸೌಲಭ್ಯಗಳು ದೊರಕುತ್ತಿಲ್ಲ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕರ್ನಾಟಕ ಭವನ-3(ಭೀಮಾ) ದಲ್ಲಿ ಕೆ.ಎಸ್.ಟಿ.ಡಿ.ಸಿ ರವರು 24.03.2020 ರಿಂದ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಲಿಫ್ಟ್ ವ್ಯವಸ್ಥೆ ಸರಿಯಾಗಿದೆ ವಾಸ್ತವ್ಯ ಹೂಡುತ್ತಿರುವ ಅತಿಥಿಗಳಿಗೆ ಕೆ.ಎಸ್.ಟಿ.ಡಿ.ಸಿ. ಹೋಟೆಲ್ ವಿಭಾಗದಲ್ಲಿ ಎಲ್ಲಾ ಹೋಟೆಲ್‌ಗಳಲ್ಲಿ ಇರುವಂತೆ ರೂಮ್ಸ್ ಸರ್ವೀಸ್ ಇರುವುದಿಲ್ಲ. ಆದರೇ, ಅತ್ಯಂತ ಅವಶ್ಯಕವಾದ ಸಂದರ್ಭಗಳಲ್ಲಿ ಸರಬರಾಜು ಮಾಡಲಾಗುತ್ತದೆ. ಹಿರಿಯ ನಾಗರೀಕರಿಗೆ, ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಹಾಗೂ ವಿಕಲಚೇತನರಿಗೆ ಹಾಗೂ ಅತಿ ಗಣ್ಯ ವ್ಯಕ್ತಿಗಳಿಗೆ ಗೌರವ ಪೂರಕವಾಗಿ ರೂಮ್ ಗೆ ಆಹಾರ ಸರಬರಾಜು ಮಾಡಲಾಗುತ್ತಿದೆ. |
| ಎ) | ಈ 3 ವರ್ಷಗಳನ್ನು ಹೊರತುಪಡಿಸಿ ಹೊಸದಾಗಿ ಭವನ ನಿರ್ಮಾಣ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ಆ ಭವನ ನಿರ್ಮಾಣ ಕೊಠಡಿ ಸಂಖ್ಯೆ ಎಷ್ಟು ಹಾಗೂ ವೆಚ್ಚವೆಷ್ಟು? | ನವದೆಹಲಿಯ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನ-1 ರ ಹಳೆಯ ಕಟ್ಟಡವನ್ನು ಕೆಡವಿ, ಕರ್ನಾಟಕ ಭವನ-1 (ಕಾವೇರಿ) ಹೊಸ ಕಟ್ಟಡ ನಿರ್ಮಾಣದ ಕಾಮಗಾರಿಗೆ (ಒಣ ನಿರ್ಮಾಣ) ರೂ.87.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದ ಆದೇಶ ಲೋಇ:271 ಬಿಎಂಎಸ್ 2017, ದಿ:01.12.2019 ರಲ್ಲಿ ನೀಡಲಾಗಿರುತ್ತದೆ.<br><br>ತದನಂತರ wet Construction ನಿರ್ಮಾಣ ಮಾದರಿ ಅನುಸರಿಸಿ ನಿರ್ಮಿಸಲು ರೂ.81.00 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಕಾಮಗಾರಿಯನ್ನು ಗುತ್ತಿಗೆ ಮೊತ್ತ ರೂ.66.01 ಕೋಟಿಗಳಿಗೆ ಗುತ್ತಿಗೆದಾರರಾದ ಶ್ರೀ.ವಿ.ಶೇಖರ್ (ಮೆ:ಬಾಲಾಜಿ ಕೃಪ ಪ್ರಾಜೆಕ್ಟ್ ಪ್ರೈ. ಲಿಮಿಟೆಡ್) ರವರಿಗೆ ಟೆಂಡರ್ ಮುಖಾಂತರ ದಿ:05.07.2019 ರಲ್ಲಿ ವಹಿಸಲಾಗಿರುತ್ತದೆ.<br><br>ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ವಿಧಾನಸಭಾ ಸ್ಪೀಕರ್ ರವರು ಹಾಗೂ ಮಾನ್ಯ ಉಪಮುಖ್ಯಮಂತ್ರಿಗಳು ನೀಲಿನಕ್ಷೆಯಲ್ಲಿ ಮಾರ್ಪಾಡು ಮಾಡುವಂತೆ ಸೂಚಿಸಿದ ಮೇರೆಗೆ, ನೀಲಿನಕ್ಷೆ ಸಮಿತಿಯು ಅನುಮೋದಿಸಿದ ನಕ್ಷೆಯ ಪ್ರಕಾರ ಕಾಮಗಾರಿಯಲ್ಲಿ Variation ಉಂಟಾಗಿರುತ್ತದೆ. ಇದರಿಂದಾಗಿ ಅನುಮೋದಿತ ಅಂದಾಜು ಮೊತ್ತ ರೂ. |

81.00 ಕೋಟಿಗಳಿಗಿಂತ ಹೆಚ್ಚು ಯಾಗುತ್ತಿರುವುದನ್ನು ಪರಿಗಣಿಸಿ, ಸರ್ಕಾರದ ಆದೇಶ ಸಂ: ಲೋಇ:271 ಬಿಎಂಎಸ್ 2017, ದಿ:16.09.2020ರ ಆದೇಶದಲ್ಲಿ ಮಾರ್ಪಾಡಿತ ಅಂದಾಜು ಮೊತ್ತ ರೂ.120.00 ಕೋಟಿಗೆ ಅನುಮೋದನೆ ನೀಡಿರುತ್ತಾರೆ.

ಸದರಿ ಹೊಸ ಕರ್ನಾಟಕ ಭವನ-1 ಕಟ್ಟಡವು 2 ಬೇಸ್ಮೆಂಟ್, ನೆಲ ಮಹಡಿ ಹಾಗೂ 6 ಮೇಲ್ಮಹಡಿಗಳನ್ನು ಒಳಗೊಂಡಿರುತ್ತದೆ. ನೀಲಿ ನಕ್ಷೆ ಸಮಿತಿಯ ಅನುಮೋದನೆಯನುಸಾರ ಸದರಿ ಭವನದ ಮಾರ್ಪಾಡಿತ ಕೊಠಡಿಗಳ ವಿವರ ಕೆಳಕಂಡಂತಿರುತ್ತದೆ.

| **Sl. No.** | **Description** | **As per approval of the committee on 11.04.2019** | **As per approval of the Committee on 09.09.2019** | **As per the instructions of the Drawing Committee (on instructions of Hon'ble CM on 26.01.2022)** |
|---|---|---|---|---|
| 01 | VVIP Rooms | 4 | 2 | 2 |
| 02 | Suite | 14 | 31 | 32 |
| 03 | Single Rooms | 12 | 15 | 18 |
| | **Total** | **30** | **48** | **52** |
| 04 | Toilets | 26 | 77 | 86 |
| 05 | Office Area | 2770.00 Sqm (Approx) | 1900.00 Sqm (Approx) | 1800.00 Sqm (Approx) |
| 06 | Room Area | 1842.00 Sqm (Approx) | 2418.00 Sqm (Approx) | 2524.00 Sqm (Approx) |
| 07 | Built up area | 12,212.00 Sqm | 12,212.00 Sqm | 12,212.00 Sqm |

**ಸಂಖ್ಯೆ: ಲೋಇ 31 ಬಿಎಲ್‌ಕ್ಯೂ 2024**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.